

ಇರದಿದ್ದರೂ ಕುತ್ತಿಗೆಯಿಂದ ಇಳಿಬಿದ್ದಿದ್ದ ಬಿಳಿ ಲುಂಗಿ ನಮಗದೇನೋ ಒಂದು ವಿಶೇಷವಾದ ವ್ಯಕ್ತಿತ್ವವನ್ನು ದಯಪಾಲಿಸಿತ್ತು. ಸುನ್ನತಿಯಾದವರು ಲುಂಗಿಯ ತುದಿಯನ್ನು ಕುತ್ತಿಗೆಯ ಹಿಂಭಾಗಕ್ಕೆ ಎಳೆದು ಕಟ್ಟಿಕೊಳ್ಳುವುದು ಸಂಪ್ರದಾಯ. ಈ ವಿಶಿಷ್ಟ ಬಗೆಯ ವಸ್ತ್ರಧಾರಣೆಯ ಬಳಿಕ ನಮಗೆ ಸಂಕೋಚವೂ ಸಂಭ್ರಮವೂ ಏಕಕಾಲಕ್ಕೆ ಆಗುತ್ತಿತ್ತು.

ಸುನ್ನತಿಯಾದ ಮೇಲೆ ಅದರ ಅನುಭವ ಹೇಗಿರುತ್ತದೆ ಎಂದು ಕುತೂಹಲಿಗಳಾದ ನನ್ನ ಕೆಲವು ಮುಸ್ಲಿಮೇತರ ಗೆಳೆಯರು ಕೇಳಿದ್ದೂ ಇದೆ. ಅವರಿಗೆ 'ಕೆಲವು ದಿನ ಮರಗಟ್ಟಿರುತ್ತದೆ' ಎಂದು ಹೇಳಿ ಅಣಕಿಸಿದ್ದೂ ಇದೆ. ಆದರೆ, ವಾಸ್ತವದಲ್ಲಿ ಸುನ್ನತಿಯಾದ ಮೇಲೆ ಅದರ ನೋವು ಯಾತನೆಗಿಂತಲೂ ಮನೆಯವರ ಉಪಚಾರ, ಕುಟುಂಬದವರ ಭೇಟಿ ಮೊದಲಾದ ನೆನಪುಗಳೇ ನಮ್ಮ ಸ್ಮೃತಿಕೋಶದಲ್ಲಿ ಜಾಗ ಪಡೆದಿರುತ್ತವೆ. ನನ್ನನ್ನು ಚಾಪೆ ಹಾಕಿ ಒಂದು ಕಡೆ ಮಲಗಿಸಿದ್ದರು. ಮನೆಯ ಪಕ್ಕಾಸಿಗೆ ಹಗ್ಗಕಟ್ಟಿ, ಉದಕ್ಕೆ ಇಳಿಬಿಟ್ಟು, ಅದರ ತುದಿಯನ್ನು ಬಿಳಿ ಬಟ್ಟೆಯ ಮಧ್ಯದಲ್ಲಿ ಪಾವಲಿಯಿಟ್ಟು ಕಟ್ಟಿದ್ದರು. ಅದನ್ನು ಹೊದ್ದು ನಾನು ಮಲಗಬೇಕಿತ್ತು. ಕೆಲವೊಮ್ಮೆ ನಾನು ಎದ್ದು ಟಾಯ್ಲೆಟಿಗೋ ಬಾತ್‌ರೂಮಿಗೋ ಹೋದರೆ ನಮ್ಮ ಮನೆಯ ಬೆಕ್ಕು ಬಂದು ಅದರೊಳಗೆ ಮಲಗುತ್ತಿತ್ತು; ಈ ವೇಳೆ ಬರುತ್ತಿದ್ದ ಕುಟುಂಬಸ್ಥರು; 'ಅರೆ ಸುನ್ನತಿಯಾಗಿದ್ದು ಯಾರಿಗೆ ಬೆಕ್ಕಿಗಾ, ಇವನಿಗಾ?' ಎಂದು ಕೇಳಿ ಮಾಡುತ್ತಿದ್ದ ತಮಾಷೆ ಬೇಡ ಬೇಡವೆಂದರೂ ಕಿವಿಯಲ್ಲಿ ಈಗಲೂ ಗುಂಯ್ ಗುಟ್ಟುತ್ತದೆ. ಆದರೆ, ಈ ನಡುವೆ ಸಂಗ್ರಹವಾಗುತ್ತಿದ್ದ ಪಾವಲಿಗಳಿಗೆ ಲೆಕ್ಕ ಉಂಟೇ? ತಲೆದಿಂಬಿನಡಿಯಲ್ಲಿ, ಚಾಪೆಯಡಿಯಲ್ಲಿ, ಲುಂಗಿಯ ತುದಿಯಲ್ಲಿ ಈ ಪಾವಲಿಗಳು ಆಶ್ರಯ ಪಡೆಯುತ್ತಿದ್ದವು. ಅವುಗಳನ್ನು ಯಾರು ಯಾರು ಎಗರಿಸಿದ್ದರೋ ನೆನಪಿಲ್ಲ. ಅಣ್ಣನಂತೂ ಕಳ್ಳ ಬೆಕ್ಕಿನಂತೆ ನನ್ನ ಪಕ್ಕದಲ್ಲೇ ಸುಳಿಯುತ್ತಿದ್ದನು. ಅವನಿಗೆ ನನ್ನ ಬಳಿಯಿರುತ್ತಿದ್ದ ಪಾವಲಿಗಳ ಮೇಲೆ ಕಣ್ಣು ಎಂದು ನನಗೆ ಬಲವಾದ ಸಂಶಯವಿತ್ತು. ಆದ್ದರಿಂದ ಅವನ ಮೇಲೆ ಹದ್ದಿನ ಕಣ್ಣಿಟ್ಟಿದ್ದೆ.

ಸುನ್ನತಿಯಾದ ಮೂರನೇ ದಿನ ಹುಣ್ಣು ತೊಳೆಯುವ ದಿನ. ಆ ದಿನ ಸಂಭ್ರಮವೂ ಹೌದು, ರಣ ಯಾತನೆಯೂ ಹೌದು. ಪತ್ತಿರಿ (ರೊಟ್ಟಿ) ಹಾಗೂ ಕೋಳಿ ಸಾರಿನ ಘಮಘಮ ಊರನ್ನು ಒಂದು ಸುತ್ತು ಹಾಕಿ ಬರುತ್ತಿತ್ತು. ಆಗಲೇ ಹೊಟ್ಟೆ ಚುರುಗುಟ್ಟತೊಡಗಿತ್ತು. ಎದ್ದು ಓಡುವಂತಿಲ್ಲ. ಮನಸು ಮಾತ್ರ ಅಡುಗೆ ಮನೆಯಲ್ಲೇ ಸುತ್ತು ಹಾಕುತ್ತಿತ್ತು. ಪಾತ್ರೆಗಳ ಸದ್ದಿಗೆ ಹೊಟ್ಟೆ ತಾಳ ಹಾಕುತ್ತಿತ್ತು. ಅಕ್ಕಪಕ್ಕದ ಹೆಂಗಸರು ಬಂದು ಅಮ್ಮನಿಗೆ ಸಹಾಯ ಮಾಡುತ್ತಿದ್ದರು. ಅವರ ಮಾತುಗಳು ಮನೆಗೆ ಹಬ್ಬದ ಕಳೆ ತಂದಿತ್ತು. ನಿಜ ಹೇಳಬೇಕೆಂದರೆ, ಅವರನ್ನು ಯಾರೂ ಕರೆದಿರಲಿಲ್ಲ. ಅವರಾಗಿಯೇ ಬಂದು ಸಹಾಯ ಮಾಡುತ್ತಿದ್ದರು. ಪಕ್ಕದ ಮನೆಯಲ್ಲಿ ಏನಾದರು 'ಕಾರ್ಯಕ್ರಮ' ನಡೆದರೆ ಅವರ ಮನೆಗೆ ಹೋಗಿ ಸಹಾಯ ಮಾಡುವುದು ತಮ್ಮ ಕರ್ತವ್ಯವೆಂದು ನೆರೆಹೊರೆಯವರು ತಿಳಿದಿದ್ದ ಕಾಲ ಅದು. ಆ ಪ್ರೀತಿಗೆ ಬೆಲೆ ಕಟ್ಟಲಾಗದು.

ಆ ದಿನ ನಾನು ಗಾಢ ನಿದ್ರೆಯಲ್ಲಿದ್ದೆ. ಇದ್ದಕ್ಕಿದ್ದಂತೆ ರಣ ಕೂಗು ಕೇಳಿಸಿತು. ನಾನು ಬೆಚ್ಚಿಬಿದ್ದು ಎದ್ದು ಕುಳಿತೆ. ನನ್ನ ಕೈಕಾಲುಗಳು ನಡುಗುತ್ತಿದ್ದವು. ಆ ಕೂಗು ಎಲ್ಲಿಂದ ಬಂತು, ಮತ್ತು ಅದು ಏನು ಎಂದು ನನಗೆ ತಿಳಿದದ್ದು ನಾನು ಬಚ್ಚಲಿಗೆ ಹೋದ ಮೇಲೆಯೇ. ಆಗಷ್ಟೇ ಸೂರ್ಯೋದಯವಾಗಿತ್ತು. ಅಮ್ಮ ಬಂದು ಕಿಟಕಿ ಬಾಗಿಲು ತೆಗೆದಾಗ ನಾನು ಹಾಸಿಗೆಗೆ ಕವುಚಿ ಕುಳಿತಿದ್ದೆ. ಅಮ್ಮನನ್ನು ನೋಡಿದ ಮೇಲೆ ಎದೆ ಹಗುರವಾಯಿತು. ಅಮ್ಮ ನನ್ನನ್ನು ಬಚ್ಚಲಿಗೆ ಕರೆದುಕೊಂಡು ಹೋದರು. ಅಲ್ಲಿ ಅಷ್ಟು ಪರಿಚಯವಿಲ್ಲದ ಒಬ್ಬರು ನಿಂತಿದ್ದರು. ಬಲಿಷ್ಠ ಕಾಯದ ಅವರನ್ನು ನೋಡಿದಾಗಲೇ ನಾನು ಹೆದರಿಬಿಟ್ಟಿದ್ದೆ. ಅವರು ಬಟ್ಟೆ ಬಿಚ್ಚಲು ಹೇಳಿದಾಗಂತೂ ಸಂಕೋಚದಿಂದ ಮುದುಡಿ ಹೋಗಿದ್ದೆ.

ಅವರು ಸುನ್ನತಿಯಾದ ಜಾಗಕ್ಕೆ ಹಾಕಿದ್ದ ಬ್ಯಾಂಡೇಜನ್ನು ತೆಗೆದು ಕೋಳಿಯ ಪುಕ್ಕದಿಂದ ಹುಣ್ಣನ್ನು ಕ್ಲೀನ್ ಮಾಡುವಾಗ ಆಗುವ ನರ ಯಾತನೆಯ ಕೂಗೇ ನನ್ನನ್ನು ಬೆಚ್ಚಿಬೀಳುವಂತೆ ಮಾಡಿದ್ದು. ಆ ಬ್ಯಾಂಡೇಜು ರಕ್ತಮಿಶ್ರಿತ ಹುಣ್ಣಿಗೆ ಅಂಟಿಕೊಂಡಿರುತ್ತದೆ. ಅದನ್ನು ನಿಧಾನಕ್ಕೆ ತೆಗೆಯಬೇಕು. ಎಷ್ಟು ನಿಧಾನಕ್ಕೆ ತೆಗೆದರೂ ಯಾತನೆ ತಪ್ಪಿದ್ದಲ್ಲ. ಆ ರಣ ನೋವಿಗೆ ನನ್ನೊಂದಿಗೆ ಸುನ್ನತಿಯಾದ ಪಕ್ಕದ ಮನೆಯ ಯಾರೋ ಕಿರುಚಿದ್ದರು. ಆ ಕೂಗು ನನ್ನನ್ನು ನಡುಗಿಸಿಬಿಟ್ಟಿತ್ತು.

ಇದನ್ನೆಲ್ಲಾ ಅಂದಾಜು ಮಾಡಿಕೊಂಡೇ ಸುನ್ನತಿಯಾದವರನ್ನು ಸಮಾಧಾನಿಸಲು ಯಾರಾದರೂ ಒಬ್ಬರು ಬಚ್ಚಲಲ್ಲಿ ನಿಂತಿರುತ್ತಿದ್ದರು. ಯಾತನೆ ಸಹಿಲಸಾಧ್ಯವಾದಾಗ ಮಕ್ಕಳು ಪ್ರತಿಭಟಿಸುವುದು ಸಹಜ. ನಾನು ಸಿಟ್ಟಿನಲ್ಲಿ ಬಚ್ಚಲ ದಂಡೆಯ ಮೇಲಿದ್ದ ಚೊಂಬಿನಿಂದ ಹುಣ್ಣು ತೊಳೆಯಲು ಬಂದಿದ್ದವನ ತಲೆಗೆ ಹೊಡೆದಿದ್ದೆನಂತೆ! ನನಗೆ ನೆನಪಿಲ್ಲ. ಪೆಟ್ಟಿನ ರಭಸಕ್ಕೆ ನನ್ನನ್ನು ಸಮಾಧಾನಿಸಲು ನಿಂತಿದ್ದ ದೊಡ್ಡಪ್ಪ ಅಲ್ಲಿಂದ ಕಾಲ್ಕಿತ್ತಿದ್ದರಂತೆ! ಬಚ್ಚಲಿನಿಂದ ಹೊರಗೆ ಬರುವಾಗ ಮೂವರೂ ಸ್ನಾನ ಮಾಡಿದಂತಿದ್ದರು ಎಂದು ಅಮ್ಮ ಹೇಳುತ್ತಿದ್ದರು. 'ನಿನ್ನ ಹುಣ್ಣು ತೊಳೆದು ಸ್ನಾನ ಮಾಡಿಸಲು ಇಬ್ಬರನ್ನು ನಿನ್ನೊಂದಿಗೆ ಬಚ್ಚಲಿಗೆ ಕಳುಹಿಸಿದ್ದೆ. ಆದರೆ, ನೀನು ಆ ಇಬ್ಬರ ತಲೆಗೂ ಸುನ್ನತಿ ಮಾಡಿ, ಸ್ನಾನ ಮಾಡಿಸಿ ಹೊರಗೆ ಕರೆದುಕೊಂಡು ಬಂದಿದ್ದೆ' ಎಂದು ಅಮ್ಮ ತಮಾಷೆ ಮಾಡುವುದಿದೆ. ಅಷ್ಟೊಂದು ಗಲಾಟೆ ಅಲ್ಲಿ ನಡೆದಿತ್ತಂತೆ!

ಹುಣ್ಣು ತೊಳೆದು ಹೊಸ ಬ್ಯಾಂಡೇಜ್ ಹಾಕಿದ ಮೇಲೆ ಒಂಥರ ರಿಲೀಫ್. ಸುನ್ನತಿಯಾದ ಮಕ್ಕಳಿಗೆ ಒಂದೇ ಕಿರಿಕಿರಿ ಎಂದರೆ, ಹೆಂಗಸರು, ಗಂಡಸರು ಎಂಬ ಭೇದಭಾವವಿಲ್ಲದೆ ಸುನ್ನತಿಯಾದ ಮದುಮಗನನ್ನು ನೋಡಲು ಬರುತ್ತಿದ್ದವರು 'ಎಲ್ಲಿ ನೋಡೋಣ, ನಿನ್ನ ಗಿಳಿಮರಿ' ಎಂದು ಲುಂಗಿ ಎತ್ತಿ ತೋರಿಸಲು ಹೇಳುತ್ತಿದ್ದುದು (ನೆನಪಿರಲಿ ಆಗ ನನಗೆ ಇನ್ನೂ ಐದು ವರ್ಷವಷ್ಟೇ!). ಅದೊಂಥರ ವಿಚಿತ್ರ ಸಂಕೋಚದ ಗಳಿಗೆ. ಇತ್ತ ಕಡೆ ಹುಣ್ಣು ತೊಳೆಯುವ ನೆಪದಲ್ಲಿ ಅಪರಿಚಿತನ ಮುಂದೆ ಬಟ್ಟೆ ಬಿಚ್ಚಿ ನಿಂತಾಗ ಅತ್ತ ಕಡೆಯಿಂದ ಹತ್ತಾರು ಹೆಣ್ಣು ಕಣ್ಣುಗಳು ಬಚ್ಚಲು ಮನೆಯ ಬಾಗಿಲ ನೂರಾರು ಓಟೆಗಳಲ್ಲಿ ಜಾಗ ಪಡೆದು ಇಣುಕುತ್ತಿದ್ದವು; ಆ ಕಣ್ಣುಗಳಲ್ಲಿ ಮದುಮಗನ ಪುಟ್ಟ ಗಿಳಿಮರಿಯನ್ನು ನೋಡುವ ಸಂಭ್ರಮ.

ಬಚ್ಚಲಿನಿಂದ ಅಡುಗೆ ಕೋಣೆ ದಾಟಿ ಹೋಗುವಾಗ ಮೂಗಿನ ಹೊಳ್ಳೆಗಳನ್ನು ಅರಳಿಸುತ್ತಿದ್ದ ಕೋಳಿ ಸಾರಿನ ಪರಿಮಳ ಆಗ ನಮಗೆ ವರ್ಷಕ್ಕೊಮ್ಮೆ ಸಿಗುತ್ತಿದ್ದ ಅಪರೂಪದ ಅತಿಥಿ. ಅದು ನೀಡುತ್ತಿದ್ದ ಸಂಭ್ರಮ ಈಗಂತೂ ಖಂಡಿತ ಸಿಗುವುದಿಲ್ಲ. ಈಗ ಕೋಳಿ ಸಾರೆಂದರೆ, ಯಾವ ಉತ್ಸಾಹವೂ ಮೂಡುವುದಿಲ್ಲ. ರೊಟ್ಟಿಯೆಂದರೆ, ಕನಸಿನಲ್ಲೂ ಎದ್ದು ಅಡುಗೆ ಮನೆಗೆ ಓಡುತ್ತಿದ್ದವನು ಈಗ ನಿಧಾನವೇ ಪ್ರಧಾನವಾಗಿಬಿಟ್ಟಿದೆ. ಆಗ ಯಾರಾದರೂ ನನಗಿಂತ ಮೊದಲು ಅಡುಗೆ ಮನೆಗೆ ಹೋಗಿ ತಿಂದು ಖಾಲಿ ಮಾಡಿ ಬಿಟ್ಟಾರೆಂಬ ಭಯವಿತ್ತು. ಈಗ ಯಾರಾದರೂ ತಿಂದರೆ ತಿನ್ನಲಿ ಎಂಬ ಮನೋಭಾವ. ಸುನ್ನತಿಯಾದ ಆರನೇ ದಿನ ಅಡುಗೆಕೋಣೆಯಲ್ಲಿ ಯಾರೂ ಇಲ್ಲವೆಂದು ಖಚಿತಪಡಿಸಿ, ಒಂದು ರೊಟ್ಟಿಯನ್ನು ಅವರವಸರದಲ್ಲಿ ತಿಂದು, ಇನ್ನೊಂದೆರಡನ್ನು ಲುಂಗಿಯೊಳಗೆ ತುರುಕಿ, ಬಾಗಿಲವರೆಗೆ ಹಿಂದಿರುಗಿ ನಡೆದವನಿಗೆ ಮುಂದೆ ಹೋಗಲು ಮನಸಾಗದೆ ಮತ್ತೆ ತಿರುಗಿ ಹೋಗಿ ಇನ್ನೊಂದೆರಡು ರೊಟ್ಟಿಯನ್ನು ಬಾಯಿಗೆ ತುರುಕಿ ಅತ್ತ ನುಂಗಲೂ ಆಗದೆ ಇತ್ತ ಉಗಿಯಲೂ ಆಗದ ಸ್ಥಿತಿಯಲ್ಲಿ ಅಮ್ಮ ಪ್ರತ್ಯಕ್ಷವಾಗುವುದು ಬಹುಶಃ ನನ್ನ ಬಾಲ್ಯದ ಕಥೆ ಮಾತ್ರ ಆಗಿರಲಿಕ್ಕಿಲ್ಲ! ಕಳ್ಳತನದ ಆ ರೋಚಕ ಅನುಭವವನ್ನು ಮರೆಯುವುದುಂಟೇ.

ಮೊನ್ನೆ ನಾನು ಕೇವಲ ಎರಡೇ ಎರಡು ರೊಟ್ಟಿ ತಿಂದು ಎದ್ದಾಗ ಅಮ್ಮ ಬೇಸರದಿಂದ, 'ಅಂದು ಹಸಿವಿತ್ತು; ಆದರೆ, ತಿನ್ನಲು ಸಾಕಷ್ಟಿರಲಿಲ್ಲ. ಇಂದು ಬೇಕಾದಷ್ಟಿದೆ. ಆದರೆ, ಹಸಿವಿಲ್ಲ' ಎಂದಾಗ ಗುಡ್ಡ ಗುಡ್ಡ ಅಲೆದು ಹೊಟ್ಟೆ ಬಿರಿಯುವಷ್ಟು ಹಣ್ಣು ಕಾಯಿಗಳನ್ನು ತಿಂದು ಮನೆಗೆ ಬಂದು ಮತ್ತೆ ತಿನ್ನಲು ಏನಾದರು ಕೊಡುವಂತೆ ಅಮ್ಮನನ್ನು ಪೀಡಿಸುತ್ತಿದ್ದುದು ನೆನಪಾಯಿತು. ಇಂದು ಹತ್ತಲು ಗುಡ್ಡವೂ ಇಲ್ಲ; ತಿನ್ನಲು ಯಮ ಹಸಿವೂ ಇಲ್ಲ.

ಪ್ರತಿಕ್ರಿಯಿಸಿ: **feedback@sudha.co.in**